ಈ) ಈಗಾಗಲೇ ಸಂಪರ್ಕ ಸುರಂಗ ಮಾರ್ಗದ ಗುತ್ತಿಗೆದಾರರಿಂದ ರೂ. 1.01 ಕೋಟಿ ಹಿಂದಕ್ಕೆ ಪಡೆಯಲಾಗಿದೆ. ವಿಚಾರಣೆ ಸಮಿತಿಯ ವರದಿ ಬಂದ ನಂತರ ಬಾಕಿ ಹಣವನ್ನು ಹಿಂದಕ್ಕೆ ಪಡೆಯುವ ಕ್ರಮ ಜರುಗಿಸಲಾಗುವುದು.

ಉ) ವಿ.ಸಿ. ಆಧುನೀಕರಣದಡಿಯಲ್ಲಿ ನಿರ್ಮಾಣಗೊಂಡಿರುವ ಸಂಪರ್ಕ ನಾಲೆಯ ಸುರಂಗದ ಕಾಮಗಾರಿಯ ಬಗ್ಗೆ ನೀಡಿದ ವರದಿಯಂತೆ ಹೆಚ್ಚುವರಿ ಪಾವತಿಸಿರುವ ಬಗ್ಗೆ ಶ್ರೀ ಸಿ.ಕೆ. ಬಾಲಕೃಷ್ಣ, ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿನ ರಚಿಸಲಾದ ವಿಚಾರಣಾ ಅಂತಿಮ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಗುಂಡ್ಲಪೇಟೆ ಟಿ.ಎ.ಪಿ.ಸಿ.ಎಂ.ಎಸ್ ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ

739(582) ಶ್ರೀ ಮಹದೇವ್ ಪ್ರಸಾದ್ ಹೆಚ್.ಎಸ್. (ಗುಂಡ್ಲಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಂಡ್ಲಪೇಟೆ ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಯುತ್ತಿದೆಯೇ?

ಆ) ವಿಚಾರಣೆ ಯಾವ ಹಂತದಲ್ಲಿದೆ?

ಇ) ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು) :

ಅ) ಹೌದು

ಆ) 1959ರ ಸಹಕಾರ ಸಂಘಗಳ ಕಾಯ್ದೆ ಕಲಂ 65ರ ಪ್ರಕಾರ ಪರಿವೀಕ್ಷಣೆ ಮುಕ್ತಾಯವಾಗಿದ್ದು, ಕಾಯ್ದೆ ಕಲಂ 64ರ ವಿಚಾರಣಾ ವರದಿಯು ಸ್ವೀಕೃತವಾಗಿರುತ್ತದೆ.

ಇ) ಪರಿವೀಕ್ಷಣಾ ವರದಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸಹಕಾರ ಸಂಘಗಳ ಕಾಯ್ದೆ ಕಲಂ 68 ರಡಿಯಲ್ಲಿ ಆದೇಶ ಹೊರಡಿಸಲಾಗಿದೆ. ಸಂಬಂಧಪಟ್ಟ ಸಂಘದ ನೌಕರರನ್ನು ಅಮಾನತ್ತಿನಲ್ಲಿಡಲಾಗಿದೆ. ಎರಡು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದ್ದು, ಇದು ತನಿಖೆಯಲ್ಲಿರುತ್ತದೆ.

ಗುಂಡ್ಲಪೇಟೆ ತಾಲ್ಲೂಕಿನಲ್ಲಿ ಪಡಿತರ ಚೀಟಿ ವಿತರಣೆ.

740(583) ಶ್ರೀ ಮಹದೇವ್ ಪ್ರಸಾದ್ ಹೆಚ್.ಎಸ್. (ಗುಂಡ್ಲಪೇಟೆ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಲಾಗಿದೆಯೇ?

ಆ) ಗುರುತಿಸಿದ್ದರೆ, ಆ ಕುಟುಂಬಗಳ ಸಂಖ್ಯೆ ಎಷ್ಟು?